5.78

# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)


CIN:U40109KA2004SGC035177

ನೋಂದಾಯಿತ ನಿಗಮ ಕಛೇರಿ :
ನಂ.29 ನಿಗಮ ಕಾರ್ಯಾಲಯ,
ವಿಜಯನಗರ 2ನೇ ಹಂತ,
ಹಿನಕಲ್, ಮೈಸೂರು-570017.
Web site :www.cescmysore.org

ಸಹಾಯಕ ಕಾರ್ಯಪಾಲಕ ಇಂಜನಿಯರ್(ವಿ)
ಗಂಡಸಿ ಉಪವಿಭಾಗ
ಗಂಡಸಿ-573119.
ಫೋನ್:- 08174 220138

ಇ-ಮೇಲ್ : aeegnd@gmail.com


ಸಂಖ್ಯೆ :AEE(E)/AET/GND: 48 ದಿನಾಂಕ: 30.5.17

## ನಡಾವಳಿ

ದಿನಾಂಕ : 24-05-2017 ರಂದು ಬೆಳಿಗ್ಗೆ 11 ಗಂಟೆಗೆ ಕಾರ್ಯಪಾಲಕ ಇಂಜನಿಯರ್ (ವಿ) ಅವರ ಅಧ್ಯಕ್ಷತೆಯಲ್ಲಿ ಗಂಡಸಿ ಉಪ-ವಿಭಾಗದಲ್ಲಿ ನೆಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಸಭೆಯು ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾಯಿತು.

<u>ಸಭೆಯಲ್ಲಿ ಹಾಜರಿದ್ದ ಅಧಿಕಾರಿ:</u>

1. ಕಾರ್ಯಪಾಲಕ ಇಂಜನಿಯರ್(ವಿ) ಕಾರ್ಯ ಮತ್ತು ಪಾಲನ ವಿಭಾಗ ಚಾ.ವಿ.ಸ.ನಿ.ನಿ. ಅರಸೀಕೆರೆ.
2. ಲೆಕ್ಕಾಧಿಕಾರಿಗಳು, ಚಾ.ವಿ.ಸ.ನಿ.ನಿ., ವಿಭಾಗೀಯ ಕಛೇರಿ ಅರಸೀಕೆರೆ.
3. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ),ಚಾ.ವಿ.ಸ.ನಿ.ನಿ. ಉಪ-ವಿಭಾಗ ಗಂಡಸಿ.
4. ಲೆಕ್ಕಾಧಿಕಾರಿಗಳು (ಆ.ಪ್ರ) ಚಾ.ವಿ.ಸ.ನಿ.ನಿ., ವಿಭಾಗೀಯ ಕಛೇರಿ ಅರಸೀಕೆರೆ.
5. ಸಹಾಯಕ ಇಂಜನಿಯರ್(ವಿ),ಚಾ.ವಿ.ಸ.ನಿ.ನಿ., ಗಂಡಸಿ ಉಪ-ವಿಭಾಗ, ಗಂಡಸಿ ಶಾಖೆ.
6. ಕಿರಿಯ ಇಂಜನಿಯರ್(ವಿ),ಚಾ.ವಿ.ಸ.ನಿ.ನಿ., ಗಂಡಸಿ ಉಪ-ವಿಭಾಗ ಭಾಗೇಶಪುರ ಶಾಖೆ.

ಸಭೆಯಲ್ಲಿ ಸುಮಾರು 38 ಸಂಖ್ಯೆಯ ಗ್ರಾಹಕರು ಹಾಜರಾಗಿರುತ್ತಾರೆ.

ಕಾರ್ಯಪಾಲಕ ಇಂಜನಿಯರ್(ವಿ) ಕಾ ಮತ್ತು ಪಾ ವಿಭಾಗೀಯ ಕಛೇರಿ, ಚಾ.ವಿ.ಸ.ನಿ.ನಿ. ಅರಸೀಕೆರೆ ರವರು ಸಭೆಗೆ ಹಾಜರದ ಗ್ರಾಹಕರ ಸಲಹಾ ಸಮಿತಿಯ ಸದಸ್ಯರುಗಳಿಗೆ ಸ್ವಾಗತಿಸಲಾಯಿತು ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಗ್ರಾಹಕರಿಗೆ ಸ್ವಾಗತಿಸಲಾಯಿತು.

1. ಶ್ರೀ ಮಹಾಲಿಂಗಪ್ಪ ಗ್ರಾಹಕರ ಸಲಹಾ ಸಮಿತಿ ಸದಸ್ಯರು :
ಜನಸಂಪರ್ಕ ಸಭೆಯ ಮಾಹಿತಿಯನ್ನು ಕೆಲವರಿಗೆ ಮಾತ್ರ ತಿಳಿಸಿರುತ್ತೀರಾ, ಎಲ್ಲಾರಿಗೂ ವಿಷಯ ತಿಳಿಸಿರುವುದಿಲ್ಲಾ ಎಂದೂ ಕೇಳಿರುತ್ತಾರೆ.

ಉತ್ತರ: ಕಾರ್ಯಪಾಲಕ ಇಂಜನಿಯರ್ (ವಿ)ಅರಸೀಕೆರೆ ರವರು ಜನಸಂಪರ್ಕ ಸಭೆಯ ನೆಡೆಯುವ ಮಾಹಿತಿ ಪತ್ರಿಕಾ ಪ್ರಕಟಣೆಯನ್ನು ಹಾಕಿಸಿದ್ದು ಹಾಗೂ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು-ಗ್ರಾಮ ಪಂಚಾಯಿತಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಲಾಯಿತು.

2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು. ಕೆಂಕೆರೆ:
ಕೆಂಕೆರೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಬೀದಿ ದೀಪಗಳು ನೇರವಾಗಿದ್ದು ,ಅವುಗಳಿಗೆ ಕಂಟ್ರೋಲ್ ಸಿಸ್ಟಮ್ ಇರುವುದಿಲ್ಲವೆಂದು ಸರಿಪಡಿಸಲು ಕೋರಿತ್ತಾರೆ.

ಉತ್ತರ: ಕಾರ್ಯಪಾಲಕ ಇಂಜನಿಯರ್ (ವಿ)ಅರಸೀಕೆರೆ ರವರು ಅಂದಾಜು ಪಟ್ಟಿಯನ್ನು ತಯಾರಿಸಿ, ಕಂಟ್ರೋಲ್ ಸಿಸ್ಟಮ್ ಅಳವಡಿಸಲು & ಕ್ರಮ ಕೈಗೊಳ್ಳಲು ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ.

3. ಶ್ರೀ ಕರುಡೇಗೌಡ್ರು ಗಂಡಸಿ:
ಎಫ್-8 ಯಡವನಹಳ್ಳಿ ಫೀಡರ್‌ನ 11 ಕೆ.ವಿ ಮಾರ್ಗವನ್ನು ಸ್ಥಳಾಂತರಿಸಲು ಕೋರಿರುತ್ತಾರೆ.

ಉತ್ತರ: -ಶಾಖಾಧಿಕಾರಿಗಳು ಸ್ಥಳಾಪರಿಶಿಲನೆ ಮಾಡಿದಾಗ ಕೆಲವು ಗ್ರಾಹಕರು 11 ಕೆ.ವಿ ಮಾರ್ಗವನ್ನು ಸ್ಥಳಾಂತರಿಸಲು ಸಹಕರಿಸುತ್ತಿಲ್ಲ.

4. ಶ್ರೀ.ಕೆ.ಎಂ.ಪ್ರಸನ್ನ ಬಿನ್ ಮಾರಯ್ಯ.ಕೊಂಡೆನಾಳು, ಗ್ರಾಹಕರ ಸಲಹಾ ಸಮಿತಿ ಸದಸ್ಯರು:
ಕೊಂಡೆನಾಳು ಜನತಾ ಬಡವಣೆಯಲ್ಲಿ ಎಲ್.ಟಿ. ವಿದ್ಯುತ್ ಮಾರ್ಗವು ಜಗ್ಗಿದ್ದು, ಸರಿಪಡಿಸಲು ಕೋರಲಾಯಿತು.

ಉತ್ತರ: ಕಾರ್ಯಪಾಲಕ ಇಂಜನಿಯರ್ (ವಿ)ಅರಸೀಕೆರೆ ರವರು ಸಹಾಯಕ ಇಂಜನಿಯರ್(ವಿ),ಚಾ.ವಿ.ಸ.ನಿ.ನಿ. ಗಂಡಸಿ ಉಪ-ವಿಭಾಗ ಗಂಡಸಿ ಶಾಖೆಯವರಿಗೆ ತುರ್ತಾಗಿ ಮಾರ್ಗವನ್ನು ಬಿಗಿಗೊಳಿಸುವ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

5. ಶ್ರೀ ನಂಜುಡಪ್ಪ ಗಂಡಸಿ :
ಗಂಡಸಿ ಗ್ರಾಮದ 100ಕೆವಿಎ ಪರಿವರ್ತಕದಲ್ಲಿ 200 ಮನೆಗಳಿದ್ದು ಅದರಲ್ಲಿ ಸುಮಾರು 60ಮನೆಗಳಿಗೆ ಸಿಂಗಲ್ ಪೇಸ್ ಮೋಟರ್ ಹೊಂದಿದ್ದು ಇದ್ದರಿಂದ ವೋಲ್ಟೇಜ್ ಕೊರತೆ ಇರುವುದಾಗಿ ತಿಳಿಸಿರುತ್ತಾರೆ.

ಉತ್ತರ: ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ. ಗಂಡಸಿರವರು ಗಂಡಸಿ ಗ್ರಾಮದ 100ಕೆವಿಎ ಪರಿವರ್ತಕದಲ್ಲಿ 6 ಅಕ್ರಮ ಪಂಪ್ ಸೆಟ್ ಗಳನ್ನು ತೆರವು ಗೋಳಿಸಿ ಹಾಗೂ ಸಹಾಯಕ ಇಂಜನಿಯರ್(ವಿ),ಗಂಡಸಿ ರವರಿಗೆ ಸ್ಥಳ ಪರೀಶೀಲಿಸಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಲಾಯಿತು.

6. ಶ್ರೀ ಬಿರೇಶ್ ಗಂಡಸಿ:
ಗಂಡಸಿ ಟೌನ್ ಫೀಡರ್‌ನಲ್ಲಿ ಪದೇ ಪದೇ ವಿದ್ಯುತ್ ಕಡಿತ ಕೊಳ್ಳುತಿರುತ್ತದೆ ಹಾಗೂ ಪೂಸ್ ಆಪ್ ಕಾಲ್ (FOC) ನಿಗದಿತ ಸಮಯದಲ್ಲಿ ಸರಿಪಡಿಸುವುದಿಲ್ಲ ಎಂದು ತಿಳಿಸಿರುತ್ತಾರೆ.

ಉತ್ತರ: ಕಾರ್ಯಪಾಲಕ ಇಂಜನಿಯರ್ (ವಿ)ಅರಸೀಕೆರೆ ರವರು ಜಿ.ಓ.ಎಸ್ ಅಳವಡಿಸಲು ಹಾಗೂ ದೂರು ಪುಸ್ತಕದಲ್ಲಿ ಕಂಪ್ಲೆಟ್ ನೋಂದಯಿಸಿ ನಿಗದಿತ ಸಮಯದಲ್ಲಿ ಸರಿಪಡಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಗಿತ್ತು.

7. ಶ್ರೀಮತಿ ಆಶಾ ಬಾಗೂರನಹಳ್ಳಿ:
ಬಾಗೂರನಹಳ್ಳಿ ತೋಟದ ಮನೆಯ ಮೇಲೆ 11 ಕೆ.ವಿ ಮಾರ್ಗವನ್ನು ಸರಿಪಡಿಸಕೋಡಬೇಕೆಂದು ಕೋರಿರುತ್ತಾರೆ.

ಉತ್ತರ: ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ. ಗಂಡಸಿರವರು ಸದರಿ ವಿಷಯದಲ್ಲಿ ಸ್ಥಳ ಪರೀಶೀಲನೆ ಮಾಡಿದ್ದು ಮತ್ತು ಶಾಖಾಧಿಕಾರಿಗಳಿಂದ ಅಂದಾಜು ಪಟ್ಟಿಯನ್ನು ತಯಾರಿಸಿ ನಿಗಮಕ್ಕೆ 10% ನ್ನು ಹಣ ಪಾವತಿಸಿ, ನೀವು ಸ್ವಂತ ಖರ್ಚಿನಲ್ಲಿ ಕಾಮಗಾರಿಯನ್ನು ಎಲ್.ಇ.ಸಿ. ಮುಖಾಂತರ ಪೂರ್ಣಗೊಳಿಸಬೇಂಕೆಂದು ತಿಳಿಸಲಾಯಿತು.

8. ಶ್ರೀ ದೇವೇಗೌಡ್ರು ಜಿ.ಎನ್. ಗಂಡಸಿ:
ಮಂಗಳಪುರ. ಜಿ. ಗ್ರಾಮದಲ್ಲಿ ಕಂಬಗಳು ಶಿಥಿಲಗೊಂಡಿದ್ದು ಅವುಗಳನ್ನು ಬದಲಾಯಿಸಲು ಕೋರಿರುತ್ತಾರೆ.

ಉತ್ತರ: ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ. ಗಂಡಸಿರವರು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ ಎಂದು ತಿಳಿಸಲಾಯಿತು.

9. ರವೀಶ್ ಕೆಂಕೆರೆ:
ಗುಂಡ್ಯಾನಹಳ್ಳಿ, ಚಿಗಚಿಗೆರೆ ಡಿ.ಓ.ಎಲ್.ಓ ಗಳು ಇಲ್ಲದೆ ನೇರಸಂಪರ್ಕದಲ್ಲಿ ಇರುವುದಾಗಿ ಹಾಗೂ ಎಲ್.ಟಿ. ವಿದ್ಯುತ್ ಮಾರ್ಗವು ಬಹಳ ಅಂತರವಿರುವುದಾಗಿ ತಿಳಿಸಿರುತ್ತಾರೆ.

ಉತ್ತರ: ಕಾರ್ಯಪಾಲಕ ಇಂಜನಿಯರ್ (ವಿ)ಅರಸೀಕೆರೆ ರವರು ಸಹಾಯಕ ಇಂಜನಿಯರ್(ವಿ),ಗಂಡಸಿ ರವರಿಗೆ ಡಿ.ಓ.ಎಲ್.ಓ ಮತ್ತು ಮಧ್ಯಂತರ ಕಂಬವನ್ನು ಆಳವಡಿಸಲು ಸ್ಥಳ ಪರೀಶೀಲಿಸಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಲಾಯಿತು.

ಸಭೆಯನ್ನು ಮದ್ಯಾಹ್ನ 12.30 ಕ್ಕೆ ಮುಕ್ತಾಯಗೊಳಿಸಲಾಯಿತು.

ಕಾರ್ಯಪಾಲಕ ಇಂಜನಿಯರ್(ವಿ),
ಕಾರ್ಯ ಮತ್ತು ಪಾಲನೆ ವಿಭಾಗ,
ಅರಸೀಕೆರೆ.

ಪ್ರತಿಗಳು:
1. ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ), ಚಾ.ವಿ.ಸ.ನಿ.ನಿ., ಮೈಸೂರು.
2. ಮುಖ್ಯ ಇಂಜನಿಯರ್(ವಿ), ಸೆಸ್ಕ್, ವಲಯ ಕಛೇರಿ, ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
3. ಅಧೀಕ್ಷಕ ಇಂಜನಿಯರ್(ವಿ), ಸೆಸ್ಕ್, ವೃತ್ತ ಕಚೇರಿ ಹಾಸನ ರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.
4. ಲೆಕ್ಕಾಧಿಕಾರಿ, ಸೆಸ್ಕ್, ವಿಭಾಗ ಕಚೇರಿ ಅರಸೀಕೆರೆ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
5. ಲೆಕ್ಕಾಧಿಕಾರಿ, (ಆಂ ಪ), ಸೆಸ್ಕ್, ವಿಭಾಗ ಕಚೇರಿ ಅರಸೀಕೆರೆ ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
6. ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ), ಗಂಡಸಿ, ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
7. ಕಛೇರಿ ಕಡತಕ್ಕೆ.

ಸಹಾಯಕ ಕಾರ್ಯಪಾಲಕ ಇಂಜನಿಯರ್(ವಿ),
ಕಾರ್ಯ ಮತ್ತು ಪಾಲನೆ ಉಪ ವಿಭಾಗ,
ಗಂಡಸಿ.